ಈ ಕರಾರಿನಂತೆ ದಿನಾಂಕ 31-3-93ರವರೆಗೆ ಮಹಾನಗರ ಪಾಲಿಕೆಯು ಯಾವುದೇ ಬಡ್ಡಿಯನ್ನು ಭೂ ಮಾಲೀಕರಿಗೆ ನೀಡಬೇಕಾಗಿಲ್ಲವೆಂತಲೂ, ಒಂದು ವೇಳೆ ಮಹಾನಗರ ಪಾಲಿಕೆಯು ಅವಾರ್ಡು ಮೊಬಲಗನ್ನು ಪಾವತಿ ಮಾಡದೇ ಹೋದಲ್ಲಿ ಉಳಿದಿರುವ ಮೊಬಲಗಿಗೆ ಭೂಸ್ವಾಧೀನ ಕಾಯ್ದೆಯ ಪ್ರಕಾರ ಬಡ್ಡಿಯನ್ನು ಪಾವತಿಮಾಡಬೇಕಾಗುತ್ತದೆಂದು ಎರಡು ಪಕ್ಷದವರು ಒಪ್ಪಿಕೊಂಡಿರುತ್ತಾರೆ. ದಿನಾಂಕ31-3-93ರ ನಂತರ ಪಾವತಿ ಆಗಿರುವ ಹಣಕ್ಕೆ ಮಹಾನಗರ ಪಾಲಿಕೆಯ ಭೂ ಮಾಲೀಕರಿಗೆ ಬಡ್ಡಿಯನ್ನು ವಿತರಿಸಲು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಹಣವನ್ನು ಬಿಡುಗಡೆ ಮಾಡಿರುತ್ತದೆ. ಸರ್ಕಾರದ ನಿರ್ದೇಶನ ಹಾಗೂ ಪಾಲಿಕೆ ಕೋರಿರುವಂತೆ ಈ 12 ಮಳಿಗೆಗಳ ಸುಪರ್ದನ್ನು ಯಥಾಸ್ಥಿತಿಯಲ್ಲಿ ನಗರಪಾಲಿಕೆಯ ಕಂದಾಯಾಧಿಕಾರಿಗಳಿಗೆ ದಿನಾಂಕ 6-5-94 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ವಹಿಸಿಕೊಟ್ಟಿರುತ್ತದೆ.

ಈ ಮಕ್ಕಾಜಿ ಚೌಕದ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಮಳಿಗೆಗಳ ಬಾಡಿಗೆದಾರರ ಪುನರ್ವಸತಿ ಯೋಜನೆ ಆದ ಮಕ್ಕಾಜಿ ಚೌಕ ಆಸೆಕ್ಸ್ ವಾಣಿಜ್ಯ ಸಂಕೀರ್ಣವು ಪುನರ್ವಸತಿ ಉದ್ದೇಶಕ್ಕಾಗಿ ನಿರ್ಮಿಸಲಾಗುವುದು. ಸ್ವಾಧೀನ ಪಡಿಸಿಕೊಳ್ಳುವ ಮಳಿಗೆಗಳ ಹಾಲಿ ಬಾಡಿಗೆದಾರರನ್ನು ಅವಕಾಶ ಮಾಡಿಕೊಡಲಾಗಿದೆ. ಸದರಿ ಜಾಗದಲ್ಲಿ ವ್ಯಾಪಾರ ನಿರತರಾಗಿರುವವರಿಗೆ ಬೇರೆ ವಸತಿ ಸೌಕರ್ಯ ಏರ್ಪಡಿಸಿದ ನಂತರ ಅವರನ್ನು ತೆರವು ಮಾಡಲು ಕ್ರಮಕೈಗೊಳ್ಳಲಾಗುತ್ತದೆ.

ಮಹಾನಗರ ಪಾಲಿಕೆ ವತಿಯಿಂದ ಪೂರ್ಣ ರೂಪದಲ್ಲಿ ಬಹು ವರ್ಷಗಳ ಹಿಂದೆ ಅಂದರೆ 1972-74 ವರ್ಷದಲ್ಲಿ 117 ಭೂಸ್ವಾಧೀನ ಪರಿಹಾರಾರ್ಥ 7.62 ಲಕ್ಷ ರೂಪಾಯಿ ಬಿಡುಗಡೆಯಾಗಿರುತ್ತದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಇದುವರೆಗೆ ಕೇವಲ12 ಮಳಿಗೆಗಳನ್ನು ನಗರಪಾಲಿಕೆಯ ಕಂದಾಯಾಧಿಕಾರಿಗಳಿಗೆ ವಹಿಸಿದ್ದು, ಉಳಿಕೆ117 ಮಳಿಗೆಗಳನ್ನು ಹಸ್ತಾಂತರಿಸಲು ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಿರುತ್ತಾರೆ.

ಮಕ್ಕಾಜಿ ಚೌಕದ 12 ಮಳಿಗೆಳ ಭೂ ಪರಿಹಾರದ ಮೊಬಲಗು 1,48,7805-00 ರೂಪಾಯಿಗಳನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳ ನಡವಳಿಕೆಗಳ ಪ್ರಕಾರ ಪಾವತಿಯಾಗಿರುತ್ತದೆ.

ಮೈಸೂರು ನಗರಪಾಲಿಕೆ ಅಭಿವೃದ್ಧಿ ಕಾರ್ಯಗಳು

834 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಸಮರ್ಪಕ ರೀತಿಯಲ್ಲಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) *ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕಾದ ಪಾಲನ್ನು ನೀಡುವ ಬಗ್ಗೆ ಸೂಚಿಸಿದ್ದ ಸರ್ಕಾರವು ನೇಮಿಸಿದ್ದು ರಾಜ್ಯ ಹಣಕಾಸು ಆಯೋಗವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ;*

ಆ) *ಹಾಗಿದ್ದಲ್ಲಿ ಯಾವ ಯಾವ ಸ್ಥಳೀಯ ಸಂಸ್ಥೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡುವಂತೆ ವರದಿಯಲ್ಲಿ ನೀಡುವುದು?*

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು) :

ಅ) ಹೌದು

ಆ) ಹೌದು

ಇ) ರಾಜ್ಯ ಹಣಕಾಸು ಆಯೋಗದ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಮೇಲಿನಂತೆ ಉದ್ಭವಿಸುವುದಿಲ್ಲ.

ಮೈಸೂರಿನ ಮಯೂರ ಕಾಂಪ್ಲೆಕ್ಸ್‌ನ ಅಂದಾಜು ವೆಚ್ಚ

835 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪೌರಾಡಳಿತ ರಾಜ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದ ಕಾಂತರಾಜ ಅರಸ್ ರಸ್ತೆಯಲ್ಲಿ ಗಣೇಶ ಚಿತ್ರಮಂದಿರದ ಬಳಿ ನಗರ ಪಾಲಿಕೆಯಿಂದ ನಿರ್ಮಿಸಲುದ್ದೇಶಿಸಿರುವ ಮಯೂರ ಕಾಂಪ್ಲೆಕ್ಸ್ ಹಿಂದಿನ ಅಂದಾಜು ವೆಚ್ಚ ಎಷ್ಟು, ಇಂದಿನ ಅಂದಾಜು ವೆಚ್ಚ ಎಷ್ಟು?*

ಆ) *ಇದನ್ನು ನಿರ್ಮಿಸಲು ಯಾರಿಗೆ ಗುತ್ತಿಗೆ ನೀಡಲಾಗಿದೆ?*

ಇ) *ಈ ಕುರಿತು ಕೆಲಸ ಪ್ರಾರಂಭಗೊಂಡು ಮತ್ತೇ ಅರ್ಧಕ್ಕೆ ನಿಂತಿರುವುದಕ್ಕೆ ಕಾರಣಗಳೇನು?*

ಈ) *ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ರಾಜ್ಯ ಪೌರಾಡಳಿತ ಸಚಿವರು) :

ಅ) ಹಿಂದಿನ ಅಂದಾಜು ವೆಚ್ಚ ರೂ. 2.75ಕೋಟಿ. ಈಗಿನ ಅಂದಾಜು ವೆಚ್ಚ ಕೆಲಸ ಪ್ರಾರಂಭಿಸಲು ನಿರ್ಣಯಿಸಿದ ನಂತರ ತಯಾರಿಸಲಾಗುವುದು.

ಆ) ಸಧ್ಯಕ್ಕೆ ಯಾರಿಗೂ ನೀಡಿರುವುದಿಲ್ಲ.

ಇ) ಕೋರ್ಟ್ ವ್ಯಾಜ್ಯ ಹಾಗೂ ಗುತ್ತಿಗೆ ರದ್ದುಪಡಿಸಿರುವುದರಿಂದ ಅರ್ಧಕ್ಕೆ ನಿಂತಿದೆ.

ಈ) ತಳಪಾಯಗಳ ಹಾಗೂ ಕಂಬಗಳ ಭದ್ರತೆ ಬಗ್ಗೆ ತಾಂತ್ರಿಕ ತಜ್ಞರ ಅಭಿಪ್ರಾಯ ಪಡೆದು ಕೆಲಸ ಪ್ರಾರಂಭಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.